1,63,32,988/– (ಒಂದು ಕೋಟಿ ಅರವತ್ಮೂರು ಲಕ್ಷ ಮೂವತ್ತೆರಡು ಸಾವಿರದ ಒಂಬೈನೂರಾ ಎಂಬತ್ತೆಂಟು ರೂ.) ಪರಿಹಾರಧನವೆಂದು ವಿತರಿಸಲಾಗುವುದು. ಅದಕ್ಕೆ ನೀವು ಈ ಕೆಳಗಿನ ಕಾಗದ ಪತ್ರಗಳನ್ನು ಆದಷ್ಟು ತ್ವರಿತವಾಗಿ ನಮ್ಮ ಅಫೀಸಿಗೆ ಒದಗಿಸತಕ್ಕದ್ದು. ತಿಳಿದಿರಲಿ.

ಹಿರಿಯಣ್ಣನಿಗೆ ತನ್ನ ಕಣ್ಣನ್ನೇ ತಾನು ನಂಬಲಾಗಲಿಲ್ಲ! ಭವಿಷ್ಯದಲ್ಲಿ ಹೆಚ್ಚು ಕಡಿಮೆ ಒಂದೂವರೆ ಕೋಟಿಗೂ ಅಧಿಕ ಮೊತ್ತದ ಅಧಿಪತಿ ತಾನಾಗುವುದು ಗ್ಯಾರಂಟಿ – ಅಂದುಕೊಂಡು ಪತ್ರದಲ್ಲಿ ನಮೂದಿಸಿದ ಅಂಕೆಗಳನ್ನು ಎಕ್ಕಂ, ದಹಂ, ಶತಂ, ಸಾವಿರ ಅಂತ ಶಾಲೆಯಲ್ಲಿ ಕಲಿಸಿದ್ದ ಗಣಿತವನ್ನು ನೆನಪಿಗೆ ತಂದುಕೊಳ್ಳುತ್ತ ಸರಿಯಾಗಿ ಮೂರಾವರ್ತಿ ಎಣಿಸಿದ. ಈ ಪಾಟಿ ಪರಿಹಾರ ಸಿಗುವುದೆಂದು ಆತ ಕನಸು ಮನಸಿನಲ್ಲಿಯೂ ಎಣಿಸಿರಲಿಲ್ಲ. ಆನಂದ–ಉದ್ವೇಗವನ್ನು ಹತ್ತಿಕ್ಕಲಾರದೇ 'ಅನಸೂಯಾ' ಅಂತ ಕೂಗಿದ. ಬಚ್ಚಲುಮನೆಯಲ್ಲಿ ಹಂಡೆಗೆ ನೀರು ತುಂಬಿಸುತ್ತಿದ್ದ ಆಕೆ ಸತ್ತೆನೋ ಕೆಟ್ಟೆನೋ ಅಂತ ಕೈಲಿದ್ದ ತಾಮ್ರದ ಕೊಡವನ್ನು ಅಲ್ಲೇ ಬಿಸುಟಿ ಧಡಬಡನೆ ಓಡಿ ಬಂದಳು. ನೋಡಿದರೆ ಪತಿರಾಯನ ವದನಾರವಿಂದದಲ್ಲಿ ಸಂತೋಷದ ಕಥಕ್ಕಳಿ. ಆಕೆ ಅವನಲ್ಲಿ ಇಂಥಹ ಉತ್ಸಾಹ, ಉಲ್ಲಾಸ ಇತ್ತೀಚಿನ ದಶಕಗಳಲ್ಲಿ ಕಂಡಿರಲಿಲ್ಲ. 'ಏನಾತ್ರೀ' ಆಕೆ ನಡುಗುವ ದನಿಯಲ್ಲೇ ಕೇಳಿದಳು. ಈತನಿಗೋ ಸಂತೋಷಾತಿರೇಕದಿಂದ ಸರಿಯಾಗಿ ಮಾತನಾಡಲೂ ಆಗಲಿಲ್ಲ. ಅಂತೂ ಹೇಗೋ ಸುಧಾರಿಸಿಕೊಂಡು 'ಇನ್ನು ಕೆಲವೇ ದಿನಗಳಲ್ಲಿ ನಾನು ಕೋಟ್ಯಧಿಪತಿ' ಅಂತ ನಕ್ಕು ತನ್ನ ಗಿರಿಜಾ ಮೀಸೆಯ ಮೇಲೆ ಕೈಯಾಡಿಸಿದ. 'ಯಂತಾ ಹೇಳ್ತಿದ್ರೀ ನೀವು? ಮಳ್ಳು – ಗಿಳ್ಳು ಹಿಡಿತೋ ಹ್ಯಾಗೆ?' ಎಂತೆಲ್ಲ ಕೇಳಿದಾಗ ಇವ ವಾಸ್ತವಕ್ಕೆ ಬಂದ. ತನಗೆ ಬಂದ ಪತ್ರವನ್ನು ಹೆಂಡತಿಯ ಎದುರಿಗೆ ಹಿಡಿದು 'ನೋಡು' ಅಂತ ಮಳ್ಳುನಗೆ ನಕ್ಕ. ಹಿಂದಿನ ಕಾಲದ ಮುಲ್ಕಿ ಪರೀಕ್ಷೆಯನ್ನು ಪಾಸು ಮಾಡಲೋ ಬಿಡಲೋ ಅಂತ ಲೆಕ್ಕ ಹಾಕಿದವಳಿಗೆ ಇದೀಗ ಓದು–ಬರಹಕ್ಕೆ ವಿರಾಮ ನೀಡಿ ಹೆಚ್ಚು–ಕಡಿಮೆ ಐದು ದಶಕಗಳೇ ಗತಿಸಿಹೋಗಿವೆ. ಹಾಗಾಗಿ ಹಿರಿಯಣ್ಣನೇ ಪತ್ರದ ಮಜಕೂರನ್ನು ಅವಳಿಗೆ ತಿಳಿಸಿದ. ಅನಸೂಯಳ ಹೃದಯ ತುಂಬಿ ಬಂದು ಕಣ್ಣುಗಳು ಮಂಜಾದವು. ಸರಸರನೆ ಒಳಗೆ ಹೋಗಿ ಮನೆ ದೇವರಿಗೆ ತುಪ್ಪದ ದೀಪ ಹಚ್ಚಿ ಇಡಗುಂಜಿ ಮಹಾಗಣಪತಿಗೆ ನೂರಾ ಒಂದು ತೆಂಗಿನಕಾಯಿಯ ಪೂಜೆಯ ಹರಕೆಯನ್ನು ಹೊತ್ತಳು. ಇಷ್ಟು ವರ್ಷ ಕಣ್ಣೀರಿನಲ್ಲಿ ಕೈ ತೊಳೆದದ್ದಕ್ಕೆ ಆ ಭಗವಂತ ಈ ಕೊನೆಗಾಲದಲ್ಲಿಯಾದರೂ ಕಣ್ಣುಬಿಟ್ಟ ಅನ್ನುವ ಕೃತಜ್ಞತಾಭಾವ ಅವಳಲ್ಲಿ ಉಮ್ಮಳಿಸಿ ಬಂತು.

ಪಕ್ಕದ ಕಾರಹಳ್ಳಿಯಲ್ಲಿ ಕೇರಿಯ ಹುಡುಗರೊಂದಿಗೆ ಕ್ರಿಕೆಟ್ ಆಡುತ್ತಿರುವ ಶ್ರೀಕಂಠನಿಗೆ ಅವನಪ್ಪನಿಗೆ ಸದ್ಯೋಭವಿಷ್ಯತ್ತಿನಲ್ಲಿ ಕೋಟ್ಯಧಿಪತಿಯಾಗುವ ಸುಯೋಗ ಕೂಡಿಬಂದಿದೆಯೆಂಬ ಖಚಿತ ಸಮಾಚಾರವನ್ನು ಯಾರೋ ಅರುಹಿದರು. ಕ್ರಿಕೆಟ್ ಬ್ಯಾಟನ್ನು ನಿಂತಲ್ಲೇ ಬಿಸಾಡಿದವ ಮನೆಯತ್ತ ಉಸಿರುಗಟ್ಟಿ ಓಡಿಬಂದ. ಅಪ್ಪನೆಂಬೋ ಅಪ್ಪ ಅಂಗಳದಲ್ಲಿ ಪ್ಲಾಸ್ಟಿಕ್ ಕುರ್ಚಿಯಲ್ಲಿ ಕಾಲುಮೇಲೆ ಕಾಲುಹಾಕಿ ಕುಳಿತು ವಿಜಯದ ನಗೆಯನ್ನು ಹೊರಸೂಸುತ್ತಿದ್ದ. ಬಲಗೈ ಬೆರಳಿನ ಸಂದಿಯಲ್ಲಿ ಸಿಗರೇಟು ಹೊಗೆಯಾಡುತ್ತಿತ್ತು. ಮಗನನ್ನು ಕಂಡವನೇ 'ಶ್ರೀಕಂಠಾ, ಸುದ್ದಿ ಗೊತ್ತಿದ್ದನಾ? ನಿನ್ನಪ್ಪ ಈಗ ಕೋಟ್ಯಧೀಶ! ನಿಂಗೆ ವಿದ್ಯೆ ನೈವೇದ್ಯ ಆಗೋತು. ಪರವಾಗಿಲ್ಲೆ ಬಿಡು, ನೀ ಯಾವುದಾದರೂ ಬಿಸಿನೆಸ್ ಮಾಡು. ನಿಂಗೆ ಎಷ್ಟು ಲಕ್ಷ ಬೇಕು ಹೇಳು, ನಾ ಕೊಡ್ತೆ. ನಿನ್ನ ಅಪ್ಪ ಅಂದ್ರೆ ಏನಂತ ತಿಳ್ಕಂಡೆ? ಹಂ?' ಅಂತ ಗತ್ತಿನಿಂದ ಪ್ರಶ್ನಿಸಿದ. 'ಅಪ್ಪಯ್ಯ, ನನ್ನ ತುರ್ತಿನ